ಎಕರೆ ಒಂದು ಕಡೆ ಮತ್ತೊಂದು ಕಡೆ ೧.೨೦ ಗುಂಟೆ ಈ ರೀತಿ ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ ಜಿಲ್ಲಾಧಿಕಾರಿಗಳು CEO ಚಿಕ್ಕಬಳ್ಳಾಪುರ, ಇವರಿಗೆ direction ಕೊಟ್ಟಿದ್ದಾರೆ. ಅವರು ತಕ್ಷಣ ಒತ್ತುವರಿ ತೆರವುಗೊಳಿಸಬೇಕೆಂದು ನೋಟೀಸ್ ಕೊಟ್ಟು ಒತ್ತುವರಿಯಾಗಿರುವುದನ್ನು ಖಿಲ್ಲ ಮಾಡಿಸಿ ಆದಷ್ಟು ಬೇಗ ಸರ್ಕಾರದ ವಶಕ್ಕೆ ಪಡಯುತ್ತೇವೆ. ಅನಂತರ ಸರ್ಕಾರದ ಇನ್ನಿತರ ಕೆಲಸಗಳಿಗಾಗಿ ಈ ಜಮೀನನ್ನು ಕಾಯ್ದಿರಿಸುತ್ತೇವೆ.

ಡಾ॥ ಎಂ.ಸಿ. ಸುಧಾಕರ್ : ಜಿಲ್ಲಾಧಿಕಾರಿಗಳು ೨೬-೨-೨೦೦೭ ರಲ್ಲಿ ಉಪ. ಸಹಾಯಕ ಆಯುಕ್ತರಿಗೆ ಪತ್ರ ಬರದು ಈಗ್ಗೆ ೧ ತಿಂಗಳು ೧೦ ದಿವಸದಾಯಿತು. ಇನ್ನೊಂದು ಕಾಲಾವಕಾಶ ಬೇಕಾ? ಏಕಿದರ ಬಗ್ಗೆ ತಾತ್ಸಾರ? ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಜಗದೀಶ ಶೆಟ್ಟರ್ : ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಒತ್ತುವರಿ ಕೇವಲ ಚಿಂತಾಮಣಿಗೆ ಸೀಮಿತವಲ್ಲ, ಬೆಂಗಳೂರು ಸುತ್ತಮುತ್ತ ೧೮ ಸಾವಿರ ಎಕರೆ ಈಗಾಗಲೇ ನಾವು identify ಮಾಡಿದ್ದೇವೆ. ಅದೇ ರೀತಿ ಚಿಂತಾಮಣಿ ಭೂಮಿಯನ್ನು ಸಹ ಆದಷ್ಟು ಬೇಗ ಒತ್ತುವರಿ ಮುಕ್ತಗೊಳಿಸಿ ಸರ್ಕಾರ ವಶಪಡಿಸಿಕೊಳ್ಳುತ್ತೇವೆ. ಈ ಸದನದಲ್ಲಿ ನಾನು ಸ್ಪಷ್ಟವಾಗಿ ಭರವಸೆ ಕೊಡುತ್ತಿದ್ದೇನೆ.

ಕೆರೆಗಳ ಹೂಳೆತ್ತುವುದು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೫ (೨೩೬೪)

ಸದಸ್ಯರ ಹೆಸರು : ಶ್ರೀ ಆಂಜನೇಯ. ಹೆಚ್ (ಭರಮಸಾಗರ)

ಉತ್ತರಿಸುವವರು : ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಭರಮಸಾಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ;

ಆ) ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

ಇ) ಹಣ ಬಿಡುಗಡೆಯಾಗಿದ್ದಲ್ಲಿ ಆ ಹಣವನ್ನು ಪಾವತಿಸಲಾಗಿದೆಯೇ ;

ಉತ್ತರ

ಅ) ಸಣ್ಣ ನೀರಾವರಿ ಇಲಾಖಾ ವತಿಯಿಂದ ೯ ಕೆರೆಗಳಲ್ಲಿ ಹಾಗೂ ಜಲ ಸಂವರ್ಧನೆ ಯೋಜನಾ ಸಂಘದ ವತಿಯಿಂದ ೧೪ ಕೆರೆಗಳಲ್ಲಿ ಹೂಳೆತ್ತಿಲಾಗಿದೆ.

ಆ) ಸಣ್ಣ ನೀರಾವರಿ ಇಲಾಖೆಯಿಂದ ೧೩.೯೮ ಲಕ್ಷ ರೂ. ಗಳನ್ನು ಹಾಗೂ ಜಲ ಸಂವರ್ಧನೆ ಯೋಜನಾ ಸಂಘದಿಂದ ೧೫೨.೧೮ ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಸಣ್ಣ ನೀರಾವರಿ ಇಲಾಖೆಯಿಂದ ೨೦೦೩–೦೪ ಮತ್ತು ೨೦೦೪–೦೫ ನೇ ಕೈಗೊಂಡ ೨ ಕೆರೆಗಳ ಹೂಳೆತ್ತುವ ಕಾಮಗಾರಿಗಳಿಗೆ ಹಣ ಪಾವತಿಸಲಾಗಿದೆ. ಇನ್ನುಳಿದಂತೆ ದಾವಣಗೆರೆ ತಾಲ್ಲೂಕಿನಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಇನ್ನೂ ಹಣ ಪಾವತಿಸಿರುವುದಿಲ್ಲ.

ಜಲ ಸಂವರ್ಧನೆ ಯೋಜನಾ ಸಂಘದಿಂದ ಕೈಗೊಂಡಿರುವ ಕಾಮಗಾರಿಗಳಿಗೆ ೪೮,೫೫,೩೨೪.೦೦ ರೂಗಳನ್ನು ಪಾವತಿಸಲಾಗಿದೆ.

ಶ್ರೀ ಹೆಚ್. ಆಂಜನೇಯ : ಅಧ್ಯಕ್ಷರೇ , ಚಿತ್ರದುರ್ಗ ತಮಗೆಲ್ಲ ಗೊತ್ತಿರುವಂತೆ ಬರಗಾಲದ ಜಿಲ್ಲೆ. ಇಲ್ಲಿ ಬಹಳಷ್ಟು ಕೆರೆಗಳಿವೆ, ಅವುಗಳನ್ನು ರಾಜಮಹಾರಾಜರು ರಾಜಾ ಮದಕರಿ ನಾಯಕ ಇಂಥವರೆಲ್ಲ ಕಟ್ಟಿಸಿದ್ದು. ಆ ಕೆರೆಗಳನ್ನು ದುರಸ್ತಿ ಮಾಡಲು ಸರ್ಕಾರ ಇವತ್ತು ಬಹಳಷ್ಟು ಹಣ ವ್ಯಯ ಮಾಡುತ್ತಾ ಇದೆ. ಆದರೆ ಹಣವನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಹಿಂದಿನ ಸರ್ಕಾರವೂ ಕೂಡ ಬಹಳ ತಾರತಮ್ಯವನ್ನು ಎಸಗಿದೆ. ಈಗಲೂ ಕೂಡ ನಮ್ಮ ಸರ್ಕಾರಗಳು ಎಲ್ಲೆಲ್ಲಿ ಬರಗಾಲ ಇದೆ, ಅಂಥ ಜಿಲ್ಲೆಗಳಿಗೆ ಆದ್ಯತೆಯನ್ನು ಕೊಟ್ಟು ಇವತ್ತು ಅಂರ್ತಜಲ ಸಂಪೂರ್ಣವಾಗಿ ಬತ್ತಿಹೋಗಿದೆ. ಮಳೆ ಬಂದ ಸಂದರ್ಭದಲ್ಲಿ ಕೆರೆಗಳಿಗೆ ನೀರು ತರತಕ್ಕ ಎಲ್ಲೆಲ್ಲಿ ನೀರು ಬರಲಿಕ್ಕೆ ಅಡ್ಡಿಯಾಗಿದೆ, ಅಂಥ ಕಡೆ ಚಾನಲ್ ಗಳನ್ನು

ಮಾಡತಕ್ಕ ಕೆಲಸಗಳಿಗೆ ಇವತ್ತು ಹೆಚ್ಚು ಹಣವನ್ನು ಕೊಡುವುದರ ಮೂಲಕ ಅಂತರ ಜಲವನ್ನು ವೃದಿಪಡಿಸುವ ಕಾರ್ಯದಲ್ಲಿ ನಿರತರಾಗಬೇಕಾಗಿದೆ. ಇಲ್ಲಿ ನನ್ನ ಕ್ಷೇತ್ರದಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ದಿಪಡಿಸಲಾಗಿದೆ ಎಂದು ನಾನು ಕೇಳಿದರೆ ಕೇವಲ ೯ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿದ್ದೀರಿ. ಮತ್ತು ಈ ಜಲ ಸಂವರ್ಧನ ಇಲಾಖೆಯಿಂದ ಎಷ್ಟು ಕೆರೆಗಳನ್ನು ಮಾಡಿದ್ದೀರಿ ಎಂದರೆ ೮ ಕೆರೆಗಳನ್ನು ಮಾಡಿದ್ದೇವೆಂದು ಹೇಳುತ್ತೀರಿ. ಅದರಿಂದ ಬಹಳಷ್ಟು ಕೆರೆಗಳು ಇರುವುದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಜರಿದ್ದಿದ್ದರೆ ಸ್ವಲ್ಪ ವಿವರವಾಗಿ ನಾನು ಕೇಳಬಹುದಾಗಿತ್ತು. ಆದ್ದರಿಂದ ಮಾನ್ಯ ರಾಮಚಂದ್ರಗೌಡರು ನಮ್ಮ ನೋವನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳಿ ನಮ್ಮ ಜಿಲ್ಲೆಯಲ್ಲಿ ಈ ಕೆರೆಗಳ ಹೂಳನ್ನು ಎತ್ತುವಂಥದ್ದು, ಮತ್ತು ಈ ಕೆರೆಗಳನ್ನು ಬಲಪಡಿಸುವ ಕಾರ್ಯಕ್ಕೆ ಹೆಚ್ಚಿನ ಹಣವನ್ನು ನೀಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ರಾಮಚಂದ್ರಗೌಡರಲ್ಲಿ ಮನವಿ ಮಾಡುತ್ತೇನೆ.

ಶ್ರೀ ರಾಮಚಂದ್ರಗೌಡ : ಮಾನ್ಯ ಅಧ್ಯಕ್ಷರೇ, ಅವರ ಬೇಡಿಕೆ ಬಹಳ ಗಹನವಾದುದು. ನಿಜಕ್ಕೂ ಕೂಡ ರಾಜ್ಯದಲ್ಲಿರುವ ಸುಮಾರು ೪೬ ಸಾವಿರ ಕೆರೆಗಳ ಹೂಳನ್ನು ಎತ್ತಬೇಕು ಎಂದು ನಾನು Private Member's Bill ಅನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಸನ್ಮಾನ್ಯ ಹೆಚ್. ಕೆ. ಪಾಟೀಲರು ನೀರಾವರಿ ಮಂತ್ರಿಯಾಗಿದ್ದಾಗ ಸುಮಾರು ಶ್ರಮವಹಿಸಿದ್ದಾರೆ. ಈಗಲೂ ಕೂಡ ನಮ್ಮ ಸರ್ಕಾರ ಬದ್ದವಾಗಿದೆ. ಎಲ್ಲ ಕೆರೆಗಳಲ್ಲಿ ಹೂಳು ಎತ್ತತಕ್ಕ ಕಾರ್ಯವನ್ನು ನಾವು ಮಾಡುತ್ತೇವೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಎಲ್ಲ ಕೆರೆ ಎಂದರೆ ಶಿಕಾರಿಪುರ ಕ್ಷೇತ್ರದ್ದು ಮಾತ್ರವೇನಾ? ಅಥವಾ ಇಡೀ ರಾಜ್ಯದಲ್ಲಿರುವ ಕೆರೆಗಳಾ ಎಂದು ಉತ್ತರವನ್ನು ಕೊಡಬೇಕು. ಶಿಕಾರಿಪುರದಲ್ಲಿ ಪ್ರತಿ ಕೆರೆಗಳಲ್ಲೂ ಹೂಳನ್ನು ಎತ್ತುತ್ತಿದ್ದಾರೆ. ಬೇರೆ ತಾಲ್ಲೂಕಿನಲ್ಲಿ ಇಲ್ಲ. ಶಿಕಾರಿಪುರದಲ್ಲಿ ಮಾತ್ರ ಕೆಲಸ ನಡೆಯುತ್ತಿದೆ. ಅದರ ಬಗ್ಗೆ ನಿಖರವಾದ ಉತ್ತರವನ್ನು ಕೊಡಬೇಕು. ಏಕೆಂದರೆ ಅವರು ಈ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಕೇವಲ ಶಿಕಾರಿಪುರಕ್ಕೆ ಮಾತ್ರ ಕೊಟ್ಟರೆ ಹೇಗೆ ? ಬೇರೆ ತಾಲ್ಲೂಕುಗಳಿಗೆ ಏಕೆ ಕೊಡುತ್ತಿಲ್ಲ ? ಶಿಕಾರಿಪುರದಲ್ಲಿ ಎಲ್ಲಾ ಕೆರೆಗಳಲ್ಲೂ ಹೂಳನ್ನು ಎತ್ತುತ್ತಿದ್ದಾರೆ. ಅದಕ್ಕೆ ಇವತ್ತು ನಿಖರವಾಗಿ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ರಾಮಚಂದ್ರಗೌಡ : ಎಲ್ಲಾ ಕೆರೆಗಳ ಬಗ್ಗೆಯೂ ಗಮನವನ್ನು ಹರಿಸಬೇಕಾಗುತ್ತದೆ. ನಾವು ಈ ಸರ್ಕಾರ ಪ್ರತಿ ಕೆರೆಗಳಲ್ಲೂ ಹೂಳನ್ನು ಎತ್ತಿಸಿ ಬಂದೋಬಸ್ತ್ ಮಾಡತಕ್ಕ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಇದಕ್ಕೆ ಶಾಸಕರ ನಿಧಿಯಲ್ಲಿ ಕೂಡ ಹಣ ಇದೆ. ಬೇರೆ ಬೇರೆ ವಿಭಾಗಗಳಲ್ಲೂ ಹಣ ಇದೆ. ಎಲ್ಲಾ ವಿಭಾಗದಲ್ಲೂ ಬರತಕ್ಕ ಹಣವನ್ನು ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಉಪಯೋಗಿಸಕೊಂಡರೆ ಬಹಳ ಪ್ರಮುಖವಾಗುತ್ತದೆ. ದಯಮಾಡಿ ತಾವು ಕೂಡ ಯಾವ ಯಾವ ಕೆರೆಗಳನ್ನು ಮಾಡಬೇಕೆಂದು ಆದ್ಯತೆ ಮೇಲೆ ಅದನ್ನು ಸರ್ಕಾರಕ್ಕೆ ಬರೆದುಕೊಟ್ಟರೆ ನಾವು ಗಮನವನ್ನು ಹರಿಸುತ್ತೇವೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಇದು ತಪ್ಪು. ನಮ್ಮಲ್ಲಿ ಯಾವ ಕೆರೆಯ ಹೂಳನ್ನು ಎತ್ತುವುದಕ್ಕೆ ಅವಕಾಶ ಸಿಕ್ಕಿಲ್ಲ. ನೀವು ದಾಖಲೆಯನ್ನು ತರಿಸಿ ನೋಡಿ. ಎಲ್ಲಾ ತಾಲ್ಲೂಕಿನ ದಾಖಲೆಯನ್ನು ತರಿಸಿ ನೋಡಿ ನಮಗೆ ಉತ್ತರವನ್ನು ಕೊಡಬೇಕು.

ಶ್ರೀರಾಮಚಂದ್ರ ಗೌಡ : ಪ್ರಸ್ತುತ ಅದಕ್ಕೆ ತಾವು ನೋಟೀಸನ್ನು ಕೊಡಿ. ಈಗ ಪ್ರಸ್ತುತ ಏನು ದಾವಣಗೆರೆ ಚಿತ್ರದುರ್ಗದ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ. ಅವರಿಗೆ ಸಮಂಜಸವಾಗಿ ಕೆರೆಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಒಂದು correction ಇದೆ. ಸುನೀತಾ ವೀರಪ್ಪಗೌಡರ ಪ್ರಶ್ನೆಗೆ ಉತ್ತರ ಹೇಳುವಾಗ ಕಾವೇರಿ ನಿಗಮ ಮುಚ್ಚಿದ ಮೇಲೆ ಎಂದು ಹೇಳಿದೆ. ಅದು ಆಗಲ್ಲ. Lift Irrigation ನಿಗಮ ಮುಚ್ಚಿಮೇಲೆ ಇದು ಸಣ್ಣ ನೀರಾವರಿ ಬಂದಿದೆ. ಅದು ಪ್ರಶ್ನೆ ೨೪೨೯ ಕ್ಕೆ ಅದು correction.

ಆ) ತಡೆಹಿಡಿಯಲಾದ ಪ್ರಶ್ನೆಗಳು

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು.

– ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು –

ಅಧ್ಯಕ್ಷರು : ಮುಂದಿನ ಪ್ರಶ್ನೆ ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು.

– ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು.